# ಎಲ್ಲಿದ್ದಾಳೆ ಮುಗ್ಧಾ?



ಚಿತ್ರ: ಅಭಿಷೇಕ್ ಎಸ್.ಎನ್.

ಮಾಡೆಲ್ ಮತ್ತು ನಟಿಯಾಗಿ ಕೆಲವು ವರ್ಷಗಳ ಹಿಂದೆ ಅಪಾರ ಭರವಸೆ ಹುಟ್ಟಿಸಿದ್ದ ಮುಗ್ಧಾ ಗೋಡ್ಸೆ ಬಾಲಿವುಡ್‌ನಿಂದ ಕಣ್ಮರೆಯಾದಳೆ.. ಎಂದು ಅಭಿಮಾನಿಗಳು ಯೋಚಿಸುತ್ತಿರುವಾಗಲೇ, ಆಕೆ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾಳೆ ಎನ್ನುವ ಸುದ್ದಿ ಬಂದಿದೆ. 12 ವರ್ಷಗಳ ಹಿಂದೆ ಮಧುರ್ ಭಂಡಾರ್ಕರ್ ನಿರ್ದೇಶನದ 'ಫ್ಯಾಷನ್' ಚಿತ್ರದಲ್ಲಿ ಪ್ರಿಯಾಂಕಾ ಚೋಪ್ರಾ ಮತ್ತು ಕಂಗನಾ ರನೌಟ್ ಜೊತೆಗೆ ಮುಖ್ಯ ಪಾತ್ರದಲ್ಲಿ ನಟಿಸಿದಾಕೆ ಮುಗ್ಧಾ. ಬಾಲಿವುಡ್‌ನ ಸ್ಪರ್ಧೆಯಲ್ಲಿ ಪ್ರಿಯಾಂಕಾ ಮತ್ತು ಕಂಗನಾ ನೂರಾರು ಮೈಲಿ ಮುಂದಕ್ಕೆ ಚಲಿಸಿದ್ದಾರೆ. ಮಾಡೆಲಿಂಗ್ ಕ್ಷೇತ್ರದ ಶೋ ಬ್ಯುಸಿನೆಸ್‌ನಲ್ಲಿ ಅವರಿಬ್ಬರಿಗಿಂತಲೂ ಹೆಚ್ಚು ಆಕರ್ಷಣೆ ಹೊಂದಿದ್ದ ಮುಗ್ಧಾ ಬೆಳ್ಳಿತೆರೆಯಲ್ಲಿ ಅದ್ಯಾಕೋ ಹೆಚ್ಚು ಮುಂದಕ್ಕೆ ಹೋಗಲಾಗಲಿಲ್ಲ. ಹಾಗೆಂದು ಅವಳಿಗೆ ಅವಕಾಶಗಳ ಕೊರತೆ ಆಗಲಿಲ್ಲ. ಆದರೆ ಸಿಕ್ಕ ಅವಕಾಶಗಳು ಕೀರ್ತಿ ತಂದುಕೊಡಲಿಲ್ಲ. ಮುಗ್ಧಾ ನಟಿಸಿರುವ ಹೊಸ ತಮಿಳು ಚಿತ್ರ 'ಧನಿ ಇರುವನ್' ಈಗ ಸಾಕಷ್ಟು ಸುದ್ದಿ ಮಾಡುತ್ತಿದೆ. ಇದರಲ್ಲಿ ಅತ್ಯುತ್ತಮ ಪಾತ್ರವಿದೆಯಂತೆ. ಹಾಗೆಯೇ ಹಿಂದಿ ವೆಬ್ ಸರಣಿಯೊಂದರಲ್ಲಿ ಮುಗ್ಧಾ ನಟಿಸುತ್ತಿದ್ದಾಳೆ. ಕಳೆದ ವರ್ಷ ಬಹು ನಿರೀಕ್ಷೆ ಇಟ್ಟುಕೊಂಡಿದ್ದ 'ಶರ್ಮಾಜೀ ಕಿ ಲಗ್ ಗಯೀ' ಚಿತ್ರ ಮಾರ್ಚ್‌ನಲ್ಲಿ ತೆರೆಗೆ ಬಂದದ್ದು ಕೊರೊನಾ ಲಾಕ್ ಡೌನ್‌ಗೆ ಬಲಿಯಾಯಿತು. ಈ ಕಾಮಿಡಿ ಸಿನಿಮಾ ಬಿಡುಗಡೆಯ ಹೊತ್ತಲ್ಲಿ ಬಾಕ್ಸಾಫೀಸ್ ಕಲೆಕ್ಷನ್ ನಡೆಸುವ ಸೂಚನೆ ಇತ್ತು. ಆದರೆ ದುರದೃಷ್ಟ ಕೈಕೊಟ್ಟಿತು.

ಈಗ ಮೂರು ಸಿನಿಮಾಗಳು ಶ್ರದ್ಧಾ ಕೈಯಲ್ಲಿವೆ. 'ಫೌಜಿ ಕಾಲಿಂಗ್' ಈ ವರ್ಷವೇ ಬಿಡುಗಡೆಯಾಗುವ ನಿರೀಕ್ಷೆ ಇದೆ. ಕೊರೊನಾ ದಾಳಿಗೆ ಮುನ್ನ ಶೂಟಿಂಗ್ ಶುರುವಾಗಿದ್ದ 'ಇಷ್ಕ್ ನೆ ಕ್ರೇಝಿ ಕಿಯಾ ರೇ' ಇದೀಗ ಶೂಟಿಂಗ್ ಮರು ಆರಂಭಿಸಿದೆಯಂತೆ. ಇನ್ನೊಂದು ಚಿತ್ರ 'ಪಾಗಲ್ ಕರ್ ದಿಯಾ ತೂನೆ'ಗೂ ಮುಗ್ಧಾ ಸಹಿ ಹಾಕಿದ್ದಾಳೆ. ಕೊರೊನಾ ಬಳಿಕ ಥಿಯೇಟರ್‌ಗಳಲ್ಲಿ ಚಿತ್ರ ಬಿಡುಗಡೆಗೆ ಹುಚ್ಚು ನಾಗಾಲೋಟ ಇರುವಾಗ ಮುಗ್ಧಾಳ ಚಿತ್ರಗಳಿಗೆ ಅವಕಾಶ ಸಿಗುತ್ತದೋ ಇಲ್ಲವೋ ಹೇಳಲಾಗದು ಎನ್ನುವ ಆತಂಕವೂ ನಿರ್ಮಾಪಕರಿಗೆ ಇದೆಯಂತೆ.

## ಭೂಮಿಯ ತಾಪತ್ರಯ

ಬಾಲಿವುಡ್‌ನಲ್ಲಿ ಈಗಿನ 'ಟಾಪ್ ಟೆನ್' ಪ್ರತಿಭಾವಂತ ನಟಿಯರ ಪಟ್ಟಿ ಮಾಡಿದರೆ ಅದರಲ್ಲಿ ಭೂಮಿ ಪೆಡ್ನೇಕರ್‌ಗೆ ಸ್ಥಾನ ಸಿಗುವುದು ಖಚಿತ. ಆದರೆ ಅವಕಾಶಗಳ ದೃಷ್ಟಿಯಲ್ಲಿ ಭೂಮಿ ಇನ್ನೂ ಅದೃಷ್ಟವಂತೆ ಅನ್ನುವಂತಿಲ್ಲ. ಮೂರು ವರ್ಷಗಳ ಹಿಂದೆ ಬಿಡುಗಡೆಯಾದ 'ಶುಭಮಂಗಲ್ ಸಾವಧಾನ್' ಚಿತ್ರ ಭೂಮಿಗೆ ಅಪಾರ ಖ್ಯಾತಿ ತಂದುಕೊಟ್ಟಿತ್ತು. ಅದರಲ್ಲಿ ಆಯುಷ್ಮಾನ್ ಖುರಾನಾ ನಾಯಕ. ಮೂರು ವರ್ಷಗಳ ಬಳಿಕ ಹಳೆಯದನ್ನು ನೆನಪಿಸಿಕೊಂಡಿರುವ ಭೂಮಿ, 'ಆಯುಷ್ಮಾನ್ ನಾನು ಈವರೆಗೆ ಜೊತೆಗೆ ನಟಿಸಿರುವ ನಾಯಕನಟರ ಪೈಕಿ ಅತ್ಯುತ್ತಮ ಜೋಡಿ' ಎಂದಿದ್ದಾಳೆ. ಆ ಚಿತ್ರದ ಶೂಟಿಂಗ್ ಸಂದರ್ಭದ ಫೋಟೊಗಳನ್ನೂ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾಳೆ.

ಭೂಮಿಗೆ ಇನ್ನಷ್ಟು ಖ್ಯಾತಿ ತಂದುಕೊಟ್ಟ ಚಿತ್ರ 'ಸಾಂಡ್ ಕಿ ಆಂಖ್'. ಇದರಲ್ಲಿ ತಾಪ್ಸೀ ಜೊತೆಗೆ ಸಮಾನ ಅವಕಾಶದ ಪಾತ್ರ ಸಿಕ್ಕಿ ಭೂಮಿಯೂ ಅತ್ಯುತ್ತಮ ನಟನೆ ನೀಡಿದ್ದಾಳೆ. ಆದರೆ ಅವಕಾಶಗಳ ದೃಷ್ಟಿಯಿಂದ ತಾಪ್ಸೀ ಯಾವತ್ತೂ ಎರಡು ಹೆಜ್ಜೆ ಮುಂದೆಯೇ. ಇದೀಗ ಭೂಮಿ ಮತ್ತು ಕೊಂಕಣಾ ಸೇನ್ ಜೊತೆಗೆ ನಟಿಸಿರುವ 'ಡೋಲಿ ಕಿಟ್ಟಿ ಔರ್ ವೋ ಚಮಕ್‌ತೇ ಸಿತಾರೆ' ಸಿನಿಮಾ ಸುದ್ದಿ ಮಾಡಿದೆ. ಇಬ್ಬರೂ ಇದರಲ್ಲಿ ಅವಳಿ ಸೋದರಿಯರ ಪಾತ್ರ ಮಾಡಿದ್ದಾರೆ. ಈ ಚಿತ್ರ ಮೇ ತಿಂಗಳಲ್ಲಿ ಥಿಯೇಟರ್ ಗಳಲ್ಲಿ ಬಿಡುಗಡೆ ಆಗಬೇಕಿತ್ತು. ಆದರೆ ಕೊರೊನಾ ಲಾಕ್‌ಡೌನ್‌ಗೆ ಚಿತ್ರ ಬಲಿಯಾಯಿತು. ಈಗ ಚಿತ್ರದ ನಿರ್ಮಾಪಕರಾದ ಬಾಲಾಜಿ ಟೆಲಿಫಿಲಂಸ್‌ನವರು ಚಿತ್ರವನ್ನು ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಮಾಡಲು ದಿನ ನಿಗದಿ ಮಾಡಿದ್ದಾರೆ. ಈ ತಿಂಗಳ 18ರಂದು ನೆಟ್‌ಫ್ಲಿಕ್ಸ್‌ನಲ್ಲಿ ಸಿನಿಮಾ ಬಿಡುಗಡೆ ಆಗಲಿದೆ. ಭೂಮಿಗೆ ಇದು ಸಂತೋಷ ತರುವ ಸಂಗತಿ ಅಲ್ಲವಂತೆ. ಆದರೆ ಅಮಿತಾಭ್‌ರಂತಹ ಹಿರಿತಲೆಯೇ ನೆಟ್‌ಫ್ಲಿಕ್ಸ್ ಮೊರೆ ಹೋಗಿರುವ ನಮ್ಮದೇನು ಮಹಾ ಎಂದು ಭೂಮಿ ಸಮಾಧಾನ ಪಟ್ಟುಕೊಂಡಿದ್ದಾಳೆ.

■ ಬಿಂದು

